
# ಬೆಳಕಿನ ಸಂಚಲನ

ಸಂಪುಟ 3, ಸಂಚಿಕೆ 9 ಜನವರಿ 2016



## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಅವರ ಜನವರಿ 4, 2009ರ ಭಾಷಣದ ಆಯ್ದ ಭಾಗಗಳು)

**ಅನು: ಶ್ರೀದೇವಿ**

ಕಾರ್ಯಪ್ರವೃತ್ತರಾಗಲು ಇದು ಸಕಾಲವಾಗಿದೆ. ಬೆಳಕನ್ನು ಚಾನಲ್ ಮಾಡುವುದಕ್ಕೆ ಇದು ಸಕಾಲವಾಗಿದೆ. **ಬೆಳಕು ಹೀಲ್ ಮಾಡುತ್ತದೆ.** ಇನ್ನು ಮುಂದೆ, ಪ್ರಪಂಚದಲ್ಲಿ ಈ ಎರಡು ಪದಗಳು ಮೊಳಗುವುದು ಮುಂದುವರೆಯುತ್ತದೆ. ಜನರಿಗೆ ಹಾಗೂ ಸ್ಥಳಗಳಿಗೆ ಹೀಲಿಂಗ್ ಅವಶ್ಯಕತೆ ಇದೆ. ಇಡೀ ಪ್ರಪಂಚಕ್ಕೆ ಹೀಲಿಂಗ್ ಅವಶ್ಯಕತೆ ಇದೆ. ಹೆಚ್ಚು ಬೆಳಕಿನ ಅವಶ್ಯಕತೆ ಇದೆ; ಅತಿ ಹೆಚ್ಚು ಪ್ರೀತಿಯ ಅವಶ್ಯಕತೆ ಇದೆ. ಇದು ನಮ್ಮ ಕೆಲಸ, ಇದು ನಮ್ಮ ಜವಾಬ್ದಾರಿ. ನಾವು ಬೆಳಕನ್ನು ಕೆಳಗೆ ತರಬೇಕು. ಬೆಳಕೇ ಪ್ರೀತಿ. ನಾವು ಅತಿ ಹೆಚ್ಚು ಪ್ರೀತಿಯನ್ನು ಕೆಳತಂದು ಅನುಭವಿಸಬೇಕು. ನಮ್ಮೊಳಗೆ ಅತಿ ದೊಡ್ಡ ಶಕ್ತಿಯಿದೆ. ನಮ್ಮ ಸ್ವಶಕ್ತಿ ಹಾಗೂ ಸ್ವಸಾಮರ್ಥ್ಯವನ್ನು ಅರಿಯಲು ಇದು ಸಕಾಲವಾಗಿದೆ.

ನಾವು ಬೆಳಕನ್ನು ಕೆಳಗೆ ತರಬಹುದು. ನಾವು ಬೆಳಕನ್ನು ಚಾನಲ್ ಮಾಡಿದಾಗ ಹಾಗೂ ಬೆಳಕನ್ನು ಹರಡಿದಾಗ, ಬೆಳಕು ಹೀಲ್ ಮಾಡುವುದು ಮಾತ್ರವಲ್ಲದೆ, ಅದು ಶುದ್ಧಗೊಳಿಸುತ್ತದೆ. ಈ ಶುದ್ಧಗೊಳಿಸುವ ಪ್ರಕ್ರಿಯೆ ವ್ಯಕ್ತಿಗಳನ್ನು ಮಾತ್ರವಲ್ಲದೆ ವ್ಯವಸ್ಥೆಗಳನ್ನೂ ಕೂಡ ಶುದ್ಧಗೊಳಿಸುತ್ತದೆ. ಇತ್ತೀಚೆಗೆ ವ್ಯವಸ್ಥೆಗಳು ಪತನಗೊಳ್ಳುವುದರ ಬಗ್ಗೆ ನಾವು ಮಾತನಾಡಿದೆವು. ಅವು ಹೇಗೆ ಪತನಗೊಳ್ಳುತ್ತವೆ? ಈ ಶುದ್ಧೀಕರಣದ ಪ್ರಕ್ರಿಯೆಯಿಂದಾಗಿ ಅವು ಪತನಗೊಳ್ಳುತ್ತವೆ. ಸಧ್ಯದಲ್ಲೇ ಈ ಅಸತ್ಯದ ವ್ಯವಸ್ಥೆಗಳು ಇಸ್ಪೀಟ್ ಕಾರ್ಡ್ಸ್ ಪ್ಯಾಕಿನಂತೆ ಉರುಳುತ್ತವೆ. ಅಸತ್ಯವಾದುದೆಲ್ಲವೂ ಪತನಗೊಳ್ಳಲೇ ಬೇಕು, ಕೆಳಗೆ ಉರುಳಲೇಬೇಕು. ಇದೇ ಸಕಾಲ, ಇದೇ ಪ್ರಾರಂಭ. ಪ್ರಾರಂಭ ಈಗಾಗಲೇ ಆಗಿದೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಫೆಬ್ರುವರಿ 1, 2016 ವಿಶ್ವ ಚಾನಲ್ಸ್ ದಿನ. ಆ ದಿನ, ಈ ಭೂಮಿಯ ಮೇಲೆ ಹೆಚ್ಚು ಪ್ರೀತಿ ಮತ್ತು ಶಾಂತಿಯನ್ನು ತರಲು ಸುಮಾರು ಹತ್ತು ಲಕ್ಷ ಮಕ್ಕಳು ಮತ್ತು ಶಿಕ್ಷಕರು ಇತರೆ ಲೈಟ್ ಚಾನಲ್‌ಗಳೊಂದಿಗೆ ಬೆಳಕನ್ನು ಚಾನಲ್ ಮಾಡುತ್ತಾರೆ. ಬಹು ಜನರ ಹಿತಕ್ಕಾಗಿ, ಹೆಚ್ಚಿನ ಪ್ರೀತಿ ಮತ್ತು ಶಾಂತಿಯನ್ನು ನಮ್ಮ ಜೀವನದಲ್ಲಿ ತರುವುದಕ್ಕಾಗಿ ಶ್ರೇಷ್ಠವಾದ ಕಾರ್ಯಗಳಲ್ಲಿ ಜನರು ತಮ್ಮನ್ನು ತೊಡಗಿಸಿಕೊಂಡಾಗಲೆಲ್ಲಾ, ವಿಶ್ವವು ತನ್ನ ಅದ್ಭುತವಾದ ಚೈತನ್ಯಗಳನ್ನು ಮತ್ತು ಪ್ರೀತಿಯನ್ನು ಕಳುಹಿಸಿ ತನ್ನದೇ ಆದ ವಿಶೇಷ ರೀತಿಯಲ್ಲಿ ಸಹಾಯ ಮಾಡುತ್ತದೆ ಹಾಗೂ ಆಶೀರ್ವದಿಸುತ್ತದೆ.

ನಾವಿರುವ ಸ್ಥಳದಿಂದಲೇ ಈ ಶ್ರೇಷ್ಠವಾದ ಘಟನೆಯಲ್ಲಿ ಭಾಗವಹಿಸಲು ಇದು ನಮಗೆ ದೊರೆತ ಮತ್ತೊಂದು ಅಸಾಧಾರಣ ಅವಕಾಶ. ಕನಿಷ್ಠ 7 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡುವುದರ ಮೂಲಕ ನಾವು ಇದರಲ್ಲಿ ಭಾಗವಹಿಸಬಹುದು.

ತಾವಿರುವ ಸ್ಥಳದಿಂದಲೇ ಲೈಟ್ ಚಾನಲ್ ಮಾಡುವುದರ ಮೂಲಕ ಆ ದಿನದಂದು ನಮ್ಮ ಜೊತೆ ಸೇರಿ ಹಾಗೂ ಶಾಂತಿ ಮತ್ತು ಪ್ರೀತಿಯಿಂದ ಕೂಡಿದ ಹೊಸ ಯುಗದ ಕಡೆಗೆ ಈ ಪ್ರಪಂಚ ದಾಪುಗಾಲು ಹಾಕಲು ಸಹಾಯ ಮಾಡಿ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ವೈಯಕ್ತಿಕ ಮತ್ತು ಜಾಗತಿಕ ಮಟ್ಟಗಳಲ್ಲಿ, 2015ನೇ ವರ್ಷವು ಗಲಭೆ ಹಾಗೂ ಪರೀಕ್ಷೆಗಳಿಂದ ತುಂಬಿತ್ತು. ಬಹಳ ದೊಡ್ಡ ಸವಾಲಾದ ಭಯೋತ್ಪಾದನೆಯನ್ನು ಪ್ರಪಂಚ ಎದುರಿಸಿತು. ಅದು, ಅನೇಕ ಜಾಗತಿಕ ನಾಯಕರು ಒಟ್ಟಿಗೆ ಸೇರಿ ಭಯೋತ್ಪಾದನೆಯ ವಿರುದ್ಧ ಹೋರಾಡಲು ಒಮ್ಮತದ ನಿರ್ಧಾರ ತೆಗೆದುಕೊಳ್ಳುವಂತೆ ಮಾಡಿತು. ಭಯೋತ್ಪಾದನೆಯನ್ನು ಅಡಗಿಸಲು, ನಾವು ನಿಷ್ಪಕ್ಷಪಾತಿಗಳಾಗಿರಬೇಕು ಹಾಗೂ ಸಾಮೂಹಿಕ ಜವಾಬ್ದಾರಿಯನ್ನು ಹೊರಬೇಕು. ನಾವು ಹಿಂಸೆಯನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕು ಹಾಗೂ ಪ್ರೀತಿ, ಭರವಸೆ ಮತ್ತು ಶಾಂತಿಯನ್ನು ಹರಡಬೇಕು.

ಲೈಟ್ ಚಾನಲಿಂಗ್ ನಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾಗಿದೆ. ಲಕ್ಷಾಂತರ ಜನರು ಇದನ್ನು ಅಭ್ಯಾಸ ಮಾಡಿದ್ದಾರೆ ಮತ್ತು ಸಾವಿರಾರು ಜನರು ಇದರಿಂದ ಪ್ರಯೋಜನವನ್ನು ಪಡೆದಿದ್ದಾರೆ.

ಫೆಬ್ರುವರಿ 1, 2016ರಂದು ನಡೆಯುವ 6ನೇ ವಿಶ್ವ ಚಾನಲ್ಸ್ ದಿನವು ಈ ಪ್ರಪಂಚದಲ್ಲಿ ಹೆಚ್ಚಿನ ಭರವಸೆ ಮತ್ತು ಮಂದಹಾಸವನ್ನು ತರಲಿ ಎಂದು ಪ್ರಾರ್ಥಿಸೋಣ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077 ಭಾರತ.
ಫೋನ್ : (080) 2846 5280, 99000 75280 (10 AM to 4 PM)
ಇ–ಮೇಲ್ : info@lightagemasters.com info@lightchannels.com
ವೆಬ್‌ಸೈಟ್ : www.lightagemasters.com www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

**ಬೆಂಗಳೂರು**

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ,
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಬುಧವಾರ (ಸಂಜೆ 6:30 - 7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ,
ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೇಕರ್

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ,
8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗ ವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವ ಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ–ಮೇಲ್ info@lightagemasters.com ಗೆ ದಯವಿಟ್ಟು ಬರೆಯಿರಿ.



ಬೆಂಗಳೂರಿನ ಹೆಣ್ಣೂರಿನಲ್ಲಿರುವ HMR ಇಂಟರ್ ನ್ಯಾಷನಲ್ ಸ್ಕೂಲ್‌ನ ಶಿಕ್ಷಕರು ಜುಲೈ 11, 2015 ರಂದು ತಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಮಾಡುತ್ತಿರುವುದು.

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ಸ್ವಚ್ಛವಾಗಿರುವುದು ಆಧ್ಯಾತ್ಮಿಕವಾಗಿರುವುದರ ಒಂದು ಭಾಗ. ಹೊರಗಿನ ಸ್ವಚ್ಛತೆ ಒಳಗಿನ ಶುದ್ಧತೆಗೆ ದಾರಿಮಾಡುತ್ತದೆ. ಸ್ವಚ್ಛವಾದ ಶರೀರ ನಮ್ಮ ಮನಸ್ಸನ್ನು (ಭಾವನೆಗಳನ್ನು) ಹಾಗೂ ಬುದ್ಧಿಶಕ್ತಿಯನ್ನು (ಆಲೋಚನೆಗಳನ್ನು) ಶುದ್ಧಗೊಳಿಸುತ್ತದೆ.
- ನೀವು ಒಳ್ಳೆಯತನವನ್ನು ಪ್ರಕಟಪಡಿಸಿದಾಗ, ಇತರರಲ್ಲಿರುವ ಒಳ್ಳೆಯತನವೂ ಪ್ರಕಟಗೊಳ್ಳುತ್ತದೆ.
- ನಿಮ್ಮ ಎಲ್ಲಾ ಅಭ್ಯಾಸಗಳಲ್ಲಿ, ಧ್ಯೇಯದ ಅನುಸರಣೆಗಳಲ್ಲಿ ಹಾಗೂ ಸಂಬಂಧಗಳಲ್ಲಿ ಪ್ರೀತಿ ಇರಲಿ. ಇದು ನಿಮ್ಮ ಜೀವನವನ್ನು ನಯಗೊಳಿಸುತ್ತದೆ ಮತ್ತು ಉನ್ನತಗೊಳಿಸುತ್ತದೆ.
- ನಾವು ಪರಿವರ್ತನೆಗೊಂಡಾಗ, ಸಹಜವಾಗಿ ಮತ್ತು ಅಪ್ರಯತ್ನವಾಗಿ ಪ್ರೀತಿ ಹೊರ ಹರಿಯುತ್ತದೆ. ನಾವು ಸಹಜವಾಗಿ ಪ್ರಮಾಣಿಕರಾಗಿರುತ್ತೇವೆ, ಸಹಜವಾಗಿ ಒಳ್ಳೆಯವರಾಗಿರುತ್ತೇವೆ ಹಾಗೂ ಸಹಜವಾಗಿ ಕೋಪಗೊಳ್ಳುವುದಿಲ್ಲ.
- ನಾವು ದೇವರಲ್ಲಿ ನೆಲಸದಿರುವಾಗ ಅಭದ್ರತೆಯನ್ನು ಅನುಭವಿಸುತ್ತೇವೆ. ದೇವರೊಂದಿಗೆ ಶ್ರುತಿಗೊಳ್ಳಿ. ಅವನ ಬಗ್ಗೆ ಅರಿವುಳ್ಳವರಾಗಿ. ನಮಗೆ ಸಹಾಯ ಮಾಡಲು ಮತ್ತು ನಮ್ಮನ್ನು ರಕ್ಷಿಸಲು ಅವನು ಎಲ್ಲಾ ಸಮಯದಲ್ಲೂ ಕಾಯುತ್ತಿರುತ್ತಾನೆ.
- ನಮಗೆ ಉಡುಗೊರೆಗಳು ದೊರೆತಾಗ ನಾವು ಸಂತೋಷಗೊಳ್ಳುತ್ತೇವೆ. ಆದರೆ ಕೆಲವು ಸಲ ನಮಗೆ ಬೇಕಾಗಿರುವುದು ಸಿಗುವುದಿಲ್ಲ. ಅದನ್ನೂ ಸಹ ಉಡುಗೊರೆಯೆಂದು ಒಪ್ಪಿಕೊಳ್ಳಿ, ಕಾರಣ, ಯಾವಾಗ ಏನನ್ನು ನಾವು ಹೊಂದಿರಬೇಕೆನ್ನುವುದು ದೇವರಿಗೆ ಗೊತ್ತಿದೆ.
- ಬೆಳಕಾಗಿ, ಪ್ರಜ್ಞೆಯಾಗಿ, ತನ್ನದೇ ಆದ ಸೃಷ್ಟಿಯಾಗಿ, ದೇವರು ಎಲ್ಲಾ ಕಡೆಯಲ್ಲೂ ಇದ್ದಾನೆ. ನಮಗೆ ತಿಳಿದಿರಲಿ ಅಥವಾ ತಿಳಿಯದೇ ಇರಲಿ, ನಾವು ಯಾವಾಗಲೂ ದೇವರಲ್ಲಿ ಜೀವಿಸಿದ್ದೇವೆ. ದೇವರು ಎಲ್ಲೆಡೆ ಇದ್ದಾನೆ ಹಾಗೂ ನಾವು ಅವನಲ್ಲಿಯೇ ಜೀವಿಸಿದ್ದೇವೆ ಎನ್ನುವುದನ್ನು ಅರಿತುಕೊಳ್ಳುವುದೇ ನಮ್ಮ ಅಧ್ಯಾತ್ಮಿಕ ಪಯಣದಲ್ಲಿನ ಒಂದು ಮಹತ್ವದ ಹೆಜ್ಜೆ.

–ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 5043 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 27.49 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಬೆಳಕಿನ ಬಳಕೆ

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಲೈಟ್ ಚಾನಲ್ ಮಾಡುವ ವ್ಯಕ್ತಿಯೊಬ್ಬರು ಬೆಳಕು, ಪ್ರೀತಿ ಹಾಗೂ ಹೂವುಗಳ ಬಗ್ಗೆ ತಮಗಾದ ಅದ್ಭುತವಾದ ಅನುಭವದ ಬಗ್ಗೆ ಬರೆದರು. ಸುಗಂಧರಾಜ ಹೂವುಗಳನ್ನು ಅವರು ಪೂಜಾವೇದಿಕೆಯ ಮೇಲೆ ಇಡುತ್ತಿದ್ದರು ಆದರೆ ಅವುಗಳಲ್ಲಿ ಎಲ್ಲಾ ಹೂಗಳು ಅರಳುತ್ತಿರಲ್ಲಿಲ್ಲವೆನ್ನುವುದನ್ನು ಗಮನಿಸಿದರು. ಎಲ್ಲಾ ಹೂಗಳು ಅರಳಿ ನಗುವುದನ್ನು ನೋಡುವುದು ಅವರ ಬಯಕೆಯಾಗಿತ್ತು. ಕೆಲವು ದಿನಗಳ ಕಾಲ ಗಮನಿಸಿದನಂತರ, ಬೆಳಕು ಮತ್ತು ಪ್ರೀತಿಯನ್ನು ಪ್ರಜ್ಞಾಪೂರ್ವಕವಾಗಿ ಬಳಸಿ ಅವುಗಳು ಅರಳಿ ನಗುವಂತೆ ಮಾಡಲು ಸಾಧ್ಯವಾಗಬಹುದೆ, ಎಂದು ಯೋಚಿಸಿದರು. ಬಹಳ ಪ್ರೀತಿಯಿಂದ ಬೆಳಕನ್ನು ಕಳುಹಿಸಲು ಪ್ರಾರಂಭಿಸಿದರು. ನಂತರ ಎಲ್ಲಾ ಹೂವುಗಳು ಅರಳಿ ನಗಲು ಪ್ರಾರಂಭಿಸುತ್ತಿರುವುದನ್ನು ಗಮನಿಸಿದರು!

ಬೆಳಕನ್ನು ಬಳಸುವುದರೊಂದಿಗೆ ಮತ್ತು ಪ್ರೀತಿಯನ್ನು ಅಭಿವ್ಯಕ್ತಿಸುವುದರೊಂದಿಗೆ, ನಿಜವಾದ ಹಾಗೂ ಪರಿಶುದ್ಧವಾದ ಅಪೇಕ್ಷೆಯೊಂದನ್ನು ವಿಶ್ವವು ನೆರವೇರಿಸಿತು. ವಿಶ್ವದ ಹಾಗೂ ಬೆಳಕಿನ ಸಹಾಯ ಪಡೆದು ಆ ಹೂವುಗಳು ಈ ವ್ಯಕ್ತಿಯ ಪ್ರೀತಿಗೆ ಪ್ರತಿಕ್ರಿಯಿಸಿದವು. ಆ ಹೂವುಗಳು ಪ್ರತಿಯಾಗಿ ತೋರಿದ ಪ್ರೀತಿಯನ್ನು ಈ ವ್ಯಕ್ತಿಯೂ ಕೂಡ ಅನುಭವಿಸಿದರು. ಈ ಸೃಷ್ಟಿಯಲ್ಲಿನ ಪ್ರತಿಯೊಂದೂ ಜೀವಂತವಾಗಿದೆ ಹಾಗೂ ನಮ್ಮ ಹೃದಯಾಂತರಾಳದಿಂದ ಬರುವ ಭಾವನೆಗಳಿಗೆ ಪ್ರತಿಕ್ರಿಯಿಸುತ್ತದೆ. ಬೆಳಕಿನ ಸಹಾಯದಿಂದ ಹಾಗೂ ಪ್ರಜ್ಞಾಪೂರ್ವಕವಾಗಿ ಪ್ರೀತಿಯನ್ನು ಪ್ರಕಟಪಡಿಸುವುದರಿಂದ ಹೂವನ್ನು ನಗುವಹಾಗೆ ಮಾಡಬಹುದು ಹಾಗೂ ಮತ್ತೊಬ್ಬರ ಮುಖದಲ್ಲಿ ಕೂಡ ನಗುವನ್ನು ತರಬಹುದು!

ನಮ್ಮ ಗುರಿಗಳ ಕಡೆಗಿನ ಪಯಣದಲ್ಲಿ, ಸಕಾರಾತ್ಮಕತೆಯ ಪ್ರಜ್ಞಾಪೂರ್ವಕ ಬಳಕೆಯು ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ನಾವು ತೊಡಗಿರುವ ಯಾವುದೇ ಸಕಾರಾತ್ಮಕ ಕೆಲಸದಲ್ಲಿ ಬೆಳಕನ್ನು ಉಪಯೋಗಿಸಿಕೊಳ್ಳಬಹುದು ಎಂದು ಗುರೂಜಿ ಕೃಷ್ಣಾನಂದರವರು ಹೇಳುತ್ತಿದ್ದರು. ನಾನು ಮೇಲೆ ಹೇಳಿದ ವ್ಯಕ್ತಿ ಹೂಗಳನ್ನು ಅರಳಿಸಲು ಬೆಳಕನ್ನು ಉಪಯೋಗಿಸಿಕೊಂಡರು. ಅನೇಕ ಮಕ್ಕಳು ತಮ್ಮ ವ್ಯಾಸಂಗದ ಸಮಯದಲ್ಲಿ ಬೆಳಕನ್ನು ಉಪಯೋಗಿಸಿಕೊಂಡು ಪ್ರಯೋಜನಗಳನ್ನು ಪಡೆದಿದ್ದಾರೆ. ಒಬ್ಬ ಹುಡುಗನಿಗೆ, ಒಂದು ಬಾರಿಗೆ ಕೇವಲ 45 ನಿಮಿಷಗಳ ಕಾಲ ಓದಲು ಸಾಧ್ಯವಾಗುತ್ತಿತ್ತು. ಲೈಟ್ ಚಾನಲ್ ಮಾಡಲು ಪ್ರಾರಂಭಿಸಿದ ಮೇಲೆ ಒಂದು ಬಾರಿಗೆ ಹೆಚ್ಚು ಸಮಯಗಳ ಕಾಲ ಅಂದರೆ 2 ಗಂಟೆಗಳವರೆಗೆ ಓದಲು ಸಾಧ್ಯವಾಯಿತೆಂದು ಅವನು ಹೇಳಿದ!

ಎಲ್ಲಾ ಸಕಾರಾತ್ಮಕ ಚೈತನ್ಯಗಳನ್ನು ಬೆಳಕು ಹೊಂದಿದೆ. ಸಕಾರಾತ್ಮಕ ಉದ್ದೇಶವನ್ನು ಅಭಿವ್ಯಕ್ತಿ ಗೊಳಿಸುವುದರಲ್ಲಿ ಅದು ಸಹಾಯ ಮಾಡುತ್ತದೆ. ಹೆಚ್ಚು ಜನರು ಶಾಂತಿಯುತವಾದ ಮತ್ತು ಉತ್ತಮವಾದ ಪ್ರಪಂಚವನ್ನು ಇಚ್ಛಿಸಿದರೆ ಹಾಗೂ ಬೆಳಕು ಮತ್ತು ಪ್ರೀತಿಯನ್ನು ತಮ್ಮ ಜೀವನದಲ್ಲಿ ಉಪಯೋಗಿಸಿಕೊಂಡರೆ, ಅವರ ಉದ್ದೇಶಗಳು ಅಭಿವ್ಯಕ್ತಿಗೊಳ್ಳುತ್ತವೆ. ಹೊಸಯುಗ ಈ ರೀತಿಯಲ್ಲಿ ಕ್ರಮೇಣವಾಗಿ ಅಭಿವ್ಯಕ್ತಿಗೊಳ್ಳುತ್ತದೆ.

ಲೈಟ್ ಚಾನಲಿಂಗ್ ಅಂತಹ ಒಂದು ಶಕ್ತಿಯುತವಾದ ಅಭ್ಯಾಸ. ಹೆಚ್ಚು ಜನರು ತಮ್ಮ ಸಕಾರಾತ್ಮಕತೆಯ ಕಡೆಗಿನ ಪಯಣದಲ್ಲಿ ಇದನ್ನು ಅಭ್ಯಾಸ ಮಾಡಿದರೆ ಅದು ನಕಾರಾತ್ಮಕತೆಯನ್ನು ಈ ಪ್ರಪಂಚದಿಂದ ತೊಡೆದುಹಾಕುತ್ತದೆ. ■

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಯಾವುದಾದರೊಂದು ಲೈಟ್ ಚಾನಲಿಂಗ್ ಕೇಂದ್ರದಲ್ಲಿ ವಾರಕ್ಕೆ ಒಮ್ಮೆ ಲೈಟ್ ಚಾನಲ್ ಮಾಡಲು ದಯವಿಟ್ಟು ನಮ್ಮ ಜೊತೆಗೂಡಿ ಹಾಗೂ ಶಾಂತಿ ಮತ್ತು ಪ್ರೀತಿಯ ಕಂಪನಗಳನ್ನು ಹರಡಲು ಮತ್ತು ಬಲಗೊಳಿಸಲು ನಮಗೆ ಸಹಾಯಮಾಡಿ. ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತ ರೊಂದಿಗೆ ದಯವಿಟ್ಟು ಈ ವಾರ್ತಾಪತ್ರವನ್ನು ಹಂಚಿಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್ ಸೈಟ್ www.lightchannels.com ನಿಂದ ಡೌನ್ ಲೋಡ್ (download) ಮಾಡಿಕೊಳ್ಳಬಹುದು.

### ಸೋಲಾಪೂರ್

ಸೋಮವಾರ ಮತ್ತು ಗುರುವಾರ
(ಸಂಜೆ 7:00 - 7:15)
ಬಾಲಗಣೇಶ್ ಮಂದಿರ, ಬುಶರ್ ಪೇಠ್,
ಮೊಹೋಲ್
☎ 09860967066, ಶ್ರೀ ವಿವೇಕಾನಂದ ಸ್ವಾಮಿ
☎ 09970800279, ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ

ಭಾನುವಾರ (ಬೆಳಿಗ್ಗೆ 10:00 -10:30)
ನಂ. 481, ಸಾಯಿಪ್ರೇಮ್, 19 ನೇ ರಸ್ತೆ,
4ನೇ ಸೆಕ್ಟರ್, ಕೆ.ಕೆ. ನಗರ
☎ 9444880409, ಶ್ರೀಮತಿ ರಾಜಲಕ್ಷ್ಮಿ ಆರ್.


### ಪುಣೆ

ಶನಿವಾರ (ಸಂಜೆ 6:30 - 7:00)
3 B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ, ಪುಣೆ - 411016
☎ 9011038169, ಶ್ರೀ ಆಶುತೋಶ್ ನವನ್‌ಗುಲ್

### ಮೀರಜ್

ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಶ್ ನಗರ ಪೋಸ್ಟ್
☎ 9822421463, ಶ್ರೀ ಮಹಾಜನ್

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು "Experiences of Light Channels" ಎಂಬ ಪುಸ್ತಕದಲ್ಲಿ ಸಂಗ್ರಹಿಸ ಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿ ಕೊಂಡಾಗ, ಎರಡನೆಯ ಸಂಪುಟವನ್ನು ಹೊರತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್ ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



# ವಿಶ್ವ ಚಾನಲ್ಸ್ ದಿನ

## 1ನೇ ಫೆಬ್ರುವರಿ 2016

### ಮಾನಸ ಫೌಂಡೇಶನ್‌ನಿಂದ ಶಾಲಾ ಅಧಿಕಾರಿಗಳಿಗೆ ಒಂದು ಮನವಿ

**ಮಾನ್ಯರೇ,**

ಫೆಬ್ರುವರಿ 1, 2016 ರಂದು 6ನೇ 'ವಿಶ್ವ ಲೈಟ್ ಚಾನಲ್ಸ್ ದಿನ'ವನ್ನು ಆಚರಿಸಲಾಗುತ್ತದೆ. ಆ ದಿನ ಬೆಳಗಿನ ಪ್ರಾರ್ಥನಾ ಸಮಯದಲ್ಲಿ ಅಥವಾ ಇನ್ನಾವುದೇ ಅನುಕೂಲವಾದ ಸಮಯದಲ್ಲಿ ಕೆಳಗೆ ತಿಳಿಸಿರುವ ರೀತಿಯಲ್ಲಿ ನಿಮ್ಮ ಶಾಲೆಗಳಲ್ಲಿ ಲೈಟ್ ಚಾನಲ್ ಮಾಡಿಸುವುದರ ಮೂಲಕ ಈ ಸಂಚಲನದಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ.

**1. ಸಂಕ್ಷಿಪ್ತವಾಗಿ ಪರಿಚಯಿಸಿ:**

ಈ ದಿನ 'ವಿಶ್ವ ಲೈಟ್ ಚಾನಲ್ಸ್ ದಿನ'. ಈ ದಿನ ಪ್ರೀತಿ ಮತ್ತು ಶಾಂತಿಯನ್ನು ಭೂಮಾತೆಯ ಮೇಲೆ ಹರಡುವ ದಿನ. ಈ ಭೂಮಿಯ ಮೇಲೆ ಶಾಂತಿ ನೆಲೆಸಲಿ ಎಂಬ ಒಂದು ಬಲವಾದ ಸಂಕಲ್ಪ ಮಾಡಿಕೊಳ್ಳೋಣ. ಭಾರತದಾದ್ಯಂತ 10 ಲಕ್ಷಕ್ಕೂ ಹೆಚ್ಚಿನ ಮಕ್ಕಳು ನಿಮ್ಮ ಜೊತೆ ಈ ದಿನ ಲೈಟ್ ಚಾನಲ್ ಮಾಡುತ್ತಾರೆ.

**2. ಕೆಳಕಂಡ ಲೈಟ್ ಚಾನಲಿಂಗ್ ತಂತ್ರವನ್ನು ಕನಿಷ್ಠ 3 ನಿಮಿಷಗಳ ಕಾಲ ಅಭ್ಯಾಸ ಮಾಡಿಸಿ:**

★ ನಿಮ್ಮ ತಲೆಯ ಮೇಲೆ ಒಂದು ಬೆಳಕಿನ ಸಾಗರವನ್ನು ಊಹಿಸಿಕೊಳ್ಳಿ.

★ ಬೆಳಕು ನಿಧಾನವಾಗಿ ನಿಮ್ಮೊಳಗೆ ಇಳಿದು ನಿಮ್ಮ ದೇಹವನ್ನು ತುಂಬಿಕೊಳ್ಳುತ್ತಿದೆ ಎಂದು ಭಾವಿಸಿಕೊಳ್ಳಿ.

★ ನಂತರ ಬೆಳಕಿನಲ್ಲಿರುವ ಶಾಂತಿ ಮತ್ತು ಪ್ರೀತಿಯನ್ನು 1 ನಿಮಿಷ ಅನುಭವಿಸಿ.

★ ನಂತರ ಆ ಬೆಳಕು ನಿಮ್ಮಿಂದ ಹೊರ ಬರುತ್ತಾ ನಿಧಾನವಾಗಿ ನಿಮ್ಮ ಸುತ್ತಲೂ ಹರಡಿ, ನಿಮ್ಮ ಶಾಲೆ, ಬಡಾವಣೆ, ದೇಶ ಮತ್ತು ಇಡೀ ಜಗತ್ತಿಗೇ ಹರಡುತ್ತಿದೆ ಎಂದು ಭಾವಿಸಿಕೊಳ್ಳಿ.

**ವಂದನೆಗಳು**

ಇತ್ತೀಚಿನ ಮಾಹಿತಿಗಳನ್ನು ಪಡೆಯಲು, **022-61816363** ಕ್ಕೆ ಒಂದು ಮಿಸ್ಡ್ ಕಾಲ್ ಕೊಡುವುದರ ಮೂಲಕ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ.

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016
ಮಾಲೀಕರು : ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು: ಶ್ರೀದೇವಿ